ದಿನಾಂಕ : 09.02.2024 ರಂದು ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ ಪರ **ಶ್ರೀ ಎಂ.ಬಿ.ಆರ್. ವಕೀಲರಿಂದ,**

ನನ್ನ ಮದುವೆಯಾಗಿ 30 ವರ್ಷ ಆಗಿರಬಹುದು. ನನ್ನ ಗಂಡ ಹೊನ್ನೂರಪ್ಪ ತೀರಿಕೊಂಡು 25 ವರ್ಷ ಆಗಿರಬಹುದು. ನಿಮ್ಮ ಗಂಡ ತೀರಿಕೊಂಡ ನಂತರ ಗಂಡನ ಮನೆಯಲ್ಲಿ ಎಷ್ಟು ದಿನ ಇದ್ದೀರಿ ಎಂದರೆ ಸಾಕ್ಷಿಯು ಈಗಲೂ ಅಲ್ಲೇ ಇರುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ವಾದ ಪತ್ರದಲ್ಲಿ ನಿಮ್ಮ ವಿಳಾಸ ಮದಾಪುರ ದರೋಜಿ ಗ್ರಾಮ ಎಂದು ಬರೆದಿರುತ್ತೀರಿ ಎಂದರೆ ಸಾಕ್ಷಿಯು ಅದು ನನ್ನ ತವರು ಮನೆ ಇರುತ್ತದೆ ಅಲ್ಲಿ ನಾನು ವಾಸ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಹೆಸರಿಗೆ ಮತ್ತು ನನ್ನ ಮಗಳ ಹೆಸರಿಗೆ ಪಡಿತರ ಚೀಟಿ, ಆಧಾರ್ ಕಾರ್ಡ್ ಮತ್ತು ಮತದಾರರ ಗುರುತಿನ ಚೀಟಿ ಇರುತ್ತದೆ. ನನ್ನ ಹೆಸರಿಗೆ ಇರುವ ಪಡಿತರ ಚೀಟಿ, ಆಧಾರ್ ಕಾರ್ಡ್ ಮತ್ತು ಮತದಾರರ ಗುರುತಿನ ಚೀಟಿಯಲ್ಲಿ ನನ್ನ ವಿಳಾಸ ಮದಾಪುರ ಗ್ರಾಮ, ಸಂಡೂರು ತಾಲೂಕು ಎಂದು ಇರುತ್ತದೆ. ಸಾಕ್ಷಿಯು ಮುಂದುವರೆದು ಇಲ್ಲಿ ಮಾಡಿಸಲು ಬರುವುದಿಲ್ಲ ಎಂದು ಹೇಳಿದ್ದು ಅಲ್ಲಿ ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ಗಂಡ ಫಿಟ್ಸ್ ಕಾಯಿಲೆ ಇಂದ ತೀರಿಕೊಂಡುರುತ್ತಾರೆ ಎಂದರೆ ಸಾಕ್ಷಿಯು ಇಲ್ಲ ಸುಸ್ತಿಯಿಂದ ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಗಂಡ ತೀರಿಕೊಂಡ ಮುಂಚೆ 5 ವರ್ಷದವರೆಗೆ ನಾನು ಬಳ್ಳಾರಿ , ಬೆಂಗಳೂರು ಆಸ್ಪತ್ರೆಗಳಲ್ಲಿ ಅವರನ್ನು ತೋರಿಸುತ್ತೇನೆ ಎಂದರೆ ಸಾಕ್ಷಿಯು ನಾನು ಬಳ್ಳಾರಿ ಮತ್ತು ಬೆಂಗಳೂರು ಆಸ್ಪತ್ರೆಗಳಿಗೆ ಅವರನ್ನು ತೋರಿಸಲು ಹೋಗಿರುವುದಿಲ್ಲ ಇಲ್ಲೇ ಲೋಕಲ್ ಆಸ್ಪತ್ರೆಗೆ ತೋರಿಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಗಂಡನಿಗೆ ಕಾಯಿಲೆ ಗುಣಮುಖವಾಗಿಲ್ಲ ಜಾಸ್ತಿ ಯಾಗಿರುವುದರಿಂದ ನಾನು ಅವರನ್ನು ಬಿಟ್ಟು ತವರು ಮನೆಗೆ ಹೋಗಿದ್ದೆ ಅವರ ಅಣ್ಣ-ತಮ್ಮಂದಿರು ಅವರನ್ನು ಬೆಂಗಳೂರು ಮತ್ತು ಬಳ್ಳಾರಿ ಆಸ್ಪತ್ರೆಗಳಲ್ಲಿ ತೋರಿಸುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡ ತೀರಿಕೊಂಡ ನಂತರ ನಾನು ನನ್ನ ಗಂಡನ ಮನೆಯಲ್ಲಿ ಇರಲಿಲ್ಲ ಆ ಕಾರಣಕ್ಕೆ ನನ್ನ ಪಡಿತರ ಚೀಟಿ ,

ಆಧಾರ್ ಕಾರ್ಡ್ ಮತ್ತು ಮತದಾರರ ಗುರುತಿನ ಚೀಟಿಯಲ್ಲಿ ಅದರ ವಿಳಾಸ ಇರುವುದಿಲ್ಲ ಎಂದರೆ ಸಾಕ್ಷಿಯು ನಾನು ಮಾಡಲು ಹೋಗಿದ್ದೆ ಅದನ್ನು ಮಾಡಿಲ್ಲ ಎಂದು ನುಡಿಯುತ್ತಾರೆ.

2. ನಿಮ್ಮ ಗಂಡ ತೀರಿಕೊಂಡ ನಂತರ ಯಾವ ಯಾವ ಆಸ್ತಿ ಮೇಲೆ ಈರಣ್ಣ, ಗಾದಿಲಿಂಗಪ್ಪ ಮತ್ತು ಮಲ್ಲೇಶಪ್ಪರವರು ಎಷ್ಟು ಸಾಲ ಮಾಡಿರುತ್ತಾರೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಸಾಲ ಮಾಡಿಲ್ಲ ಎಂದು ನುಡಿಯುತ್ತಾರೆ. ಪಹಣಿಗಳಲ್ಲಿ ಎಸ್.ಬಿ.ಐ ಬ್ಯಾಂಕ್ ಸಾಲ ಇದೆ ಎಂದು ನಮೂದು ಆಗಿದ್ದು ಅದರ ಬಗ್ಗೆ ಯಾರು ಸಾಲ ಮಾಡಿರುತ್ತಾರೆ ಮತ್ತು ಅದು ಚಾಲ್ತಿಯಲ್ಲಿ ಇದೆಯಾ ಎಂಬ ಬಗ್ಗೆ ನೀವು ವಿಚಾರಣೆ ಮಾಡಿದ್ದಿರಾ ಎಂದರೆ ಸಾಕ್ಷಿಯು ಸಾಲ ಇಲ್ಲ ಎಂದು ತಿಳಿದು ವಿಚಾರಣೆ ಮಾಡಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ವಾದ ಪತ್ರದಲ್ಲಿ ಅನುಸೂಚಿ ಆಸ್ತಿ 1 ರಿಂದ 6 , 8, 11 ರಿಂದ 17 ಆಸ್ತಿಗಳು ಭೀಮಾಣ್ಣ ಅವರಿಂದ ಈರಣ್ಣರವರಿಗೆ ವಂಶ ಪಾರಂಪರೆಯಾಗಿ ಬಂದಿರುತ್ತದೆ ಎಂದು ನೀವು ಬರೆದಿದ್ದು ಯಾವ ದಾಖಲೆಯನ್ನು ನೋಡಿ ಬರೆದಿರಾ ಎಂದರೆ ಸಾಕ್ಷಿಯು ಯಾವ ದಾಖಲೆಯನ್ನು ನೋಡಿಲ್ಲ ನನ್ನ ಗಂಡನ ಆಸ್ತಿ ಎಂದು ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ದಂಡಿನ ಈರಣ್ಣರವರು 30 ಎಕರೆ ಜಮೀನನ್ನು ಖರೀದಿ ಮಾಡಿದ್ದರು. ಸಾಕ್ಷಿಯು ಮುಂದುವರೆದು ಮಲ್ಲಾರೆಡ್ಡಿ ಹೊಲ ಕರೆಮನೆ ಮತ್ತು ತೋಟ ಖರೀದಿ ಮಾಡಿದ್ದರು ಎಂದು ನುಡಿಯುತ್ತಾರೆ. ನಾನು ಖರೀದಿ ಪತ್ರಗಳನ್ನು ನೋಡಿರುತ್ತೇನೆ . ನಾನು ಸದರಿ ಖರೀದಿ ಪತ್ರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ . 30 ಎಕರೆ ಜಮೀನು ಈರಣ್ಣರವರು ಖರೀದಿ ಮಾಡಿರುತ್ತಾರೆ ಎಂದು ನೀವು ಹೇಳಿದ್ದು ಯಾರ ಆದಾಯದಿಂದ ಖರೀದಿ ಮಾಡಿದ್ದರು ಎಂದರೆ ಸಾಕ್ಷಿಯು ಎಲ್ಲರೂ ದುಡಿದು ಕೊಟ್ಟರು ಅದರಿಂದ ಖರೀದಿ ಮಾಡಿದ್ದರು ಎಂದು ನುಡಿಯುತ್ತಾರೆ. 30 ಎಕರೆ ಜಮೀನು ಈರಣ್ಣರವರು ಖರೀದಿ ಮಾಡಿದ ಜಮೀನು ಹೊರತು ಪಡಿಸಿ ಅವರಿಗೆ 20 ಎಕರೆ ಜಮೀನು ಪಿತ್ರಾರ್ಜಿತವಾಗಿ ಬಂದಿರುತ್ತದೆ. ವಾದ ಪತ್ರದಲ್ಲಿ ಈರಣ್ಣರವರಿಗೆ ಇಂತಹ ಸರ್ವೇ ನಂಬರ್ ರ 20 ಎಕರೆ ಜಮೀನು ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂದು ನಾನು ಬರೆದಿರುತ್ತೇನೆ.

3. ದಂಡಿನ ಮರಿಸ್ವಾಮಿ ನನ್ನ ಗಂಡನಿಗೆ ಚಿಕ್ಕಪ್ಪಾಗಬೇಕು. ದಂಡಿನ ಮರಿಸ್ವಾಮಿರವರಿಗೆ 1 ಎಕರೆ 2 ಸೆಂಟ್ಸ್ ಜಮೀನು ಹೊಗಬೇಕು ಎಂದು ನೀವು ನಿಮ್ಮ ವಾದ ಪತ್ರದಲ್ಲಿ ಬರೆದಿದ್ದು ಅದು ಯಾವ ಸರ್ವೇ ನಂಬರ್ ರಲ್ಲಿ ಹೋಗಬೇಕು ಎಂದರೆ ಸಾಕ್ಷಿಯು ಅವರಿಂದ ನಾವು 1 ಎಕರೆ 2 ಸೆಂಟ್ಸ್ ಜಮೀನು ಪಡೆದಿರುತ್ತೇವೆ ಎಂದು ನುಡಿಯುತ್ತಾರೆ. 1 ಎಕರೆ 2 ಸೆಂಟ್ಸ್ ಜಮೀನು ಯಾರ ಹೆಸರಿನಲ್ಲಿ ಖರೀದಿ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾವೆಲ್ಲರೂ ಕೂಡಿ ತೆಗೆದುಕೊಂಡಿರುತ್ತೇವೆ. ಪ್ರತಿವಾದಿ ನಂಬರ್ 1 ಎ, 2, 3 ಮತ್ತು 4 ರವರು ಹಳೆಕೋಟೆಯಲ್ಲಿ ವಾಸ ಮಾಡುತ್ತಾರೆ.

**(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಆಲಿಸಿ ನೀಡಲಾಯಿತು.)**

( ನನ್ನ ಹೇಳಿಕೆಯಂತೆ ಮುಕ್ತನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ,

ಸೀನಿಯರ್ ಸಿವಿಲ್ ನ್ಯಾಯಾಧೀಶರು, ಸಿರುಗುಪ್ಪ.